ಕುಣಾಲ ಅಂದರೆ ಚಂದದ ಕಣ್ಣಿರೋ ಹಕ್ಕಿಯೂ ಹೌದಂತೆ... ನಾನ್ನು ಹುಟ್ಟೋದಿಕ್ಕೆ ಎಷ್ಟೋ ಮೊದಲೇ, ಅಮ್ಮ ಈ ಹೆಸರು ನಿರ್ಧರಿಸಿಯಾಗಿತ್ತು –ಮಗ ಹುಟ್ಟುತಾನೆ ಅನ್ನೋ ಭರವಸೆಯಲ್ಲಿ. ಆದರೆ ಹುಟ್ಟಿದ್ದು ನಾನು! ಹಾಗಾಗಿ ತನ್ನಿಷ್ಟದ ಹೆಸರಿನ ಲಿಂಗ ಬದಲಾಯಿಸಿಬಿಟ್ಟಿದ್ದಳು!!' ಅಂತಂದು ನಕ್ಕಿದ್ದಳು. ಆಗ ಅವಳ ಚಂದದ ಮೋರೆಗೆ ಮತ್ತೂ ಅಂದ ಕಟ್ಟುವ ಹಾಗೆ, ಅವಳ ಕಣ್ಣುಗಳು ಚೆನ್ನಾಗಿ ಸೆಳಕಿದ್ದವು. 'ನಾನು ನನ್ನ ಅಮ್ಮನ ಮೇರೆಗೆ ಉಂಟಾದವಳು. ಅವಳಿಲ್ಲದೆ ನಾನೇನೂ ಅಲ್ಲ...' ಬಲು ತಾದಾತ್ಮ್ಯದಿಂದ ಆಗಾಗ ತನ್ನ ಅಮ್ಮನ ಕುರಿತಾಡುವಳು. ಮೈ ಮಾಮ್ ಈಸ್ ದಿಸ್... ಮೈ ಮಾಮ್ ಈಸ್ ದಟ್...

ಗ್ಗ್... ಗಾಡ್! ಜಗತ್ತಿನಲ್ಲಿ ಅಮ್ಮಂದಿರೇ ಇಲ್ಲವೇ?– ಅಂದುಕೊಳ್ಳುತ್ತಿದ್ದೆ!

ಈ ಕುಣಾಲಿ, ಕೆಲಕಾಲ ನನ್ನ ಆಫೀಸಿನಲ್ಲಿದ್ದಳು. ಆರೇಳು ತಿಂಗಳಿದ್ದಳೇನೋ... 'ಪಬ್ಲಿಕ್ ರಿಲೇಶನ್ಸ್'ನ ಕೆಲಸ. ಮಾಸ್ ಕಮ್ಯುನಿಕೇಶನಿನಲ್ಲಿ ಸ್ನಾತಕೆಯೆಂದು ನನ್ನ ಕ್ಲಯಂಟೋರ್ವನ ಶಿಫಾರಸಿನ ಮೇರೆಗೆ ಆಫೀಸು ಹೊಕ್ಕವಳು, ಎರಡು ವರ್ಷಗಳ ಕಾಲ ಸೇವೆ ಸಲ್ಲಿಸುವೆನೆಂದು 'ಬಾಂಡ್' ಕೂಡ ಬರೆದುಕೊಟ್ಟಿದ್ದಳು. ಸುರುಸುರುವಿನಲ್ಲಿ ಎಲ್ಲ ಚೆನ್ನೇ ಇದ್ದಿತು. ದಿನಗಳೆದಂತೆ ಚೂರೂ ಬಂಡವಾಳವಿಲ್ಲವೆಂದು ಗೊತ್ತಾಗಿಹೋಯಿತು. ಮಂತ್ರಕ್ಕಿಂತ ಉಗುಳು ಹೆಚ್ಚೆಂದು ಅನ್ನುತ್ತಾರಲ್ಲ, ಥೇಟು ಹಾಗೇ! ಚೆನ್ನಾಗಿ ಮಾತು ಬಲ್ಲವಳಾದರೂ, ಮತ್ತು ಇದೇ ವಾಕ್ಚತುರತೆಯ ಮೇರೆಗೆ ಎಂಥದೇ ಸನ್ನಿವೇಶವನ್ನೂ ನಿರ್ವಹಿಸುವಳಾದರೂ– ಮೇಜಿನ ಕೆಲಸದಲ್ಲಿ ಮಾತ್ರ ಅಷ್ಟಕ್ಕಷ್ಟೆ. ಡೆಸ್ಕ್‌ವರ್ಕು... ಕಂಪ್ಯೂಟರು... ಇ–ಮೇಲು... ಇತ್ಯಾದಿ ಸಂವಹನೆಯಲ್ಲಿ ತೀರಾ ಮೋಸವಾಗಿದ್ದಳು. ಅಥವಾ, ಮೋಸವೇ ತಾನಾಗಿದ್ದಳು. ವ್ಯಾಕರಣವಿಲ್ಲ. ತಪ್ಪು ತಪ್ಪು ಸ್ಪೆಲಿಂಗು. ಒಂದೇ ಉಚ್ಚಾರಣೆಯ ಎರಡು ಪದಗಳಿದ್ದಲ್ಲಿ, ಯಾವುದೆಲ್ಲಿ ಬಳಸುವುದೆಂದು ಗೊತ್ತಿಲ್ಲ. ಇನ್ನು ಪಂಕ್ಚುಏಷನ್ನೋ ಆ ದೇವರಿಗೇ ಪ್ರೀತಿ. ಅಲ್ಪಾರ್ಧ ಪೂರ್ಣ ವಿರಾಮಗಳ ಅರಿವಿಲ್ಲ. ಹೋಗಲಿ, ಸೆಮಿಕಾಲೊನ್ ಕಾಮಾ ಬಳಿಕ ಸ್ಪೇಸು ಬಿಡಬೇಕೆನ್ನುವ ಪ್ರತೀತಿಯೂ ಇಲ್ಲ... ಹೋಗಲಿ, ಕಂಪ್ಯೂಟರು ಸ್ವಯಂ ಕೊಡುವ ತಿದ್ದುಪಡಿಯ ಸೂಚನೆಯನ್ನು ಗಮನಿಸಿಯಾಳೇ? ಊಹ್ಞೂಂ... ಅದೂ ಇಲ್ಲ! ಸಾಲು ಸಾಲನ್ನೂ, ಪದ ಪದವನ್ನೂ... ಒಮ್ಮೊಮ್ಮೆ ಅಕ್ಷರಾಕ್ಷರವನ್ನೂ ತಿದ್ದುವುದಾಗುವುದು. ಸಾಕು ಸಾಕೆನಿಸಿ ಹೋಗುವುದು! ಹಾಳಾಗಿ ಹೋಗಲಿ ಅಂದುಕೊಳ್ಳಲಿಕ್ಕೆ ತಿಂಗಳಿಗೆ ಇಪ್ಪತ್ತು ಸಾವಿರವೇನು ಕಡಿಮೆ ದುಡ್ಡೆ? ಥತ್... ಬೇಜಾರಾಗುವುದು. ಇನ್ನು, ಬೇರೆ ಕೆಲಸವಾದರೂ ಸುಸೂತ್ರವೇ? ಕಾಗದಪತ್ರಗಳ ಮೇಂಟೆನೆನ್ಸೂ ಅಷ್ಟೇ ಸವಕಲು... ಬೇಕೆನಿಸುವಾಗ ಬೇಕಾದುದೇ ಕೈಗೊದಗುವುದಿಲ್ಲ! ದಿನವೂ ಫೈಲುಗಳನ್ನು ಇಡಿ ಇಡಿ ಕಿತ್ತು ಗೂರಾಡುವುದಾಗುವುದು... ಛೇ!

ಇಷ್ಟಿದ್ದೂ, ನನ್ನ ಕ್ಲಯಂಟುಗಳೆಲ್ಲ ಕುಣಾಲಿಗೆ ಮಾರು ಹೋಗಿದ್ದು ಹೌದು. ಅವಳ ರೂಪಿಗೆ ಮತ್ತು ಮಾತುಗಾರಿಕೆಗೆ... 'ಶಿ ಈಸ್ ಇಂಟೆನ್ಸ್ಲೀ ಸ್ಮಾರ್ಟ್, ಅಭಿಜಿತ್... ಎಲ್ಲಿಂದ ಕರಕೊಂಡು ಬಂದಿರಿ?' ಎಂದು ಕೇಳುವರು. ಏನು ಮೋಡಿಯೋ ಕಾಣೆ, ಕಂಡಾಪಟ್ಟೆ ಹೊಗಳುವರು. 'ಹೌದು ಹೌದು... ನೋಡೋಕೆ ಚೆನ್ನಿರೋವಾಗ ಉಳಿದಿದ್ದೆಲ್ಲ ಗೌಣ!' ಎಂದು ನನ್ನನಗೇ ಹೇಳಿಕೊಳ್ಳುತ್ತಿದ್ದೆ.

ಇವೇನೇ ಇದ್ದರೂ, ಎರಡು ಮೂರು ತಿಂಗಳುಗಳ ಕಾಲ ಕುಣಾಲಿಯ ಎಲ್ಲ ಅಡಾವುಡಿಯನ್ನು ತಡೆದುಕೊಂಡೆ... ಒಂದು, ನನ್ನೊಬ್ಬ ಬಲು ಮುಖ್ಯ ಕ್ಲಯಂಟನ ಶಿಫಾರಸಿನ ಮೇರೆಗೆ ಬಂದಿದ್ದಾಳೆಂಬುದಕ್ಕೆ; ಎರಡು, 'ಬಾಂಡ್' ಬರೆದುಕೊಟ್ಟಿದ್ದಾಳೆಂಬ ಕಾರಣಕ್ಕೆ.